ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚೆಮಾಡಿ ಇದರ ಬಗ್ಗೆ ಈ ಸದನ ಮುಗಿಯುವುದರೊಳಗೆ ಒಂದು ನಿರ್ಣಯವನ್ನು ತೆಗೆದುಕೊಂಡು ನಾನು ಸದನದಲ್ಲಿ ತಿಳಿಸುತ್ತೇನೆಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ

ಮಾನ್ಯ ಸದಸ್ಯರು ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು, ಅದನ್ನು ಬದಲಾಯಿಸುವುದಕ್ಕೆ ಹೋಗಬಾರದು ತಾಲ್ಲೂಕು ಪಂಚಾಯತ್ ಅಧ್ಯಕ್ಷರನ್ನು ತೆಗೆದು ಶಾಸಕರನ್ನು ಮಾಡಿದರೆ, ಸರಿಯಾಗಿರುವುದಿಲ್ಲ ಅದನ್ನು ಮಾಡುವುದಕ್ಕೆ ಹೋಗಬೇಡಿ

ದಾದಿಯರುಗಳಿಗೆ ರಾಷ್ಟ್ರೀಯ ಫ್ಲಾರೆನ್ಸ್ ನೈಟಿಂಗೇಲ್ ಪ್ರಶಸ್ತಿ

53(135) ಐವಾನ್ ನಿಗ್ಲಿ (ನಾಮಾಂಕಿತ)

ಮಾನ್ಯ ವೈದ್ಯಕೀಯ ಶೀಕ್ಷಣ ಸವಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕರ್ನಾಟಕದ 3 ಶುಶ್ರೂಷಕರನ್ನು ರಾಷ್ಟ್ರಪತಿ ಭವನದಿಂದ ಪ್ರಧಾನ ಮಾಡುವ ಫ್ಲಾರೆನ್ಸ್ ನೈಟಿಂಗೇಲ್ ಪ್ರಶಸ್ತಿಗೆ ನಾಮನಿರ್ದೇಶನಕ್ಕೆ ಶಿಪಾರಸ್ಸು ಮಾಡಲು ಭಾರತೀಯ ಶುಶ್ರೂಷ ಪರಿಷತ್ತು ಅಧವಾ ಕೇಂದ್ರ ಆರೋಗ್ಯ ಸಚಿವಾಲಯದಿಂದ ಸರ್ಕಾರಕ್ಕೆ ಅರ್ಜಿ ಬಂದಿರುವುದೇ?

ಆ) ಹಾಗಿದ್ದಲ್ಲಿ ಈ ವಿಷಯದ ಬಗ್ಗೆ ಪ್ರತಿಕ್ರಿಯಿಸದಿರುವುದರ ಬಗ್ಗೆ ಕಾರಣಗಳೇನು?

ವೈದ್ಯಕೀಯ ಶಿಕ್ಷಣ ಸಚಿವರು

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಶ್ರೀ ಐವಾನ್ ನಿಗ್ಲಿ ಮಾನ್ಯ ಅಧ್ಯಕ್ಷರೆ, ನಾನು ಮೊಟ್ಟಮೊದಲಿಗೆ ಸರ್ಕಾರ ಕೊಟ್ಟಿರುವಂಥಾ ಉತ್ತರದಲ್ಲಿ ತಪ್ಪು ಮಾಹಿತಿಯನ್ನು

ಕೊಟ್ಟಿದ್ದಾರೆಂದು ಹೇಳುತ್ತೇನೆ ಪ್ರತಿಯೊಂದು ಸ್ಟೇಟ್‌ಗೆ ಮೂರು ಜನರನ್ನು ನಾಮಿನೇಟ್ ಮಾಡಬೇಕೆಂದು ಪತ್ರವನ್ನು ಕೇಂದ್ರದಿಂದ ಕಳುಹಿಸಿದ್ದಾರೆ A circular has been sent to each and every state in India to recommend 3 nurses for each state for this award which is given by HIS EXCELLECNY PRESIDENT OF INDIA Nursing profession is the most sacred profession, let it be in India or let it be in any other country also

ಶ್ರೀ ಬಿ ಕೆ ಗೋಪಾಲ ಕೃಷ್ಣ ಬೇಳೂರು ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕನ್ನಡ ಬಾಷೆಯನ್ನು ಚೆನ್ನಾಗಿ ಮಾತನಾಡುತ್ತಾರೆ

ಶ್ರೀ ಐವಾನ್ ನಿಗ್ಲಿ ನಾನು ಕನ್ನಡ ಮಾತನಾಡುತ್ತೇನೆ, ಆದರೆ ಏನಾದರೂ ತಪ್ಪು ಆದರೆ ನೀವೆಲ್ಲಾ ಸೇರಿ ನನಗೆ ತಮಾಷೆ ಮಾಡುತ್ತೀರಿ

ಶ್ರೀ ಬಿ ಕೆ ಗೋಪಾಲ ಕೃಷ್ಣ ಬೇಳೂರು ಮಾನ್ಯ ಅಧ್ಯಕ್ಷರೆ, ಮಾನ್ಯ ಐವಾನ್ ನಿಗ್ಲಿಯವರುಗೆ ಕನ್ನಡದಲ್ಲಿ ಮಾತನಾಡುವುದಕ್ಕೆ ಹೇಳಿ, ಅವರು ನಮ್ಮ ಹತ್ತಿರ ತುಂಬಾ ಚೆನ್ನಾಗಿ ಕನ್ನಡ ಮಾತನಾಡುತ್ತಾರೆ ಅವರಿಗೆ ಕನ್ನಡದಲ್ಲಿ ಮಾತನಾಡುವುದಕ್ಕೆ ಹೇಳಿ

ಅಧ್ಯಕ್ಷರು ಅವರು ಆಂಗ್ಲೋ ಇಂಡಿಯನ್ ಅಲ್ಲವಾ, ಅವರು ಮಾತನಾಡಲಿ ಬಿಡಿ

ಶ್ರೀ ಐವಾನ್ ನಿಗ್ಲಿ ಮಾನ್ಯ ಅಧ್ಯಕ್ಷರೆ, ನನ್ನ ಮಾತೃ ಭಾಷೆ ಇಂಗ್ಲಿಷ್ I am nominated as an MLA from the Anglo Indian community under Article 333

ಅಧ್ಯಕ್ಷರು ನೀವು ಪ್ರಶ್ನೆಯನ್ನು ಕೇಳಿ ನೀವು ನಿಮ್ಮ ಹಿನ್ನೆಲೆಯನ್ನು ಹೇಳುತ್ತಾ ಇದ್ದೀರಿ

ಶ್ರೀ ಐವಾನ್ ನಿಗ್ಲಿ ಆದುದರಿಂದ ನಾನು ಇಂಗ್ಲಿಷ್‌ನಲ್ಲಿ ಮಾತನಾಡಿದರೆ ತಪ್ಪಿಲ್ಲ ಅರ್ಧವಾಯಿತಾ? ನಾನು ಕನ್ನಡದಲ್ಲೂ ಮಾತ ನಾಡುತ್ತೇನೆ ಇಂಗ್ಲಿಷ್ ನಲ್ಲೂ ಮಾತನಾಡುತ್ತೇನೆ

ಅಧ್ಯಕ್ಷರು ಮಾನ್ಯ ಐವಾನ್ ನಿಗ್ಲಿಯವರೆ, ಪ್ರಶ್ನೆ ಕೇಳಿ, ಸಮಯ

ಹೋಗುತ್ತದೆ ಎಲ್ಲರೂ ಕುಳಿತುಕೊಳ್ಳಿ, ಅವರು ಪ್ರಶ್ನೆಯನ್ನು ಕೇಳಲಿ

ಶ್ರೀ ಐವಾನ್ ನಿಗ್ಲಿ ಮಾನ್ಯ ಅಧ್ಯಕ್ಷರೆ, ಇವರು ನನಗೆ ಮಾತನಾಡು ವುದಕ್ಕೆ ಬಿಡುವುದಿಲ್ಲ

ಅಧ್ಯಕ್ಷರು ಆಯಿತು ನೀವು ಪ್ರಶ್ನೆ ಕೇಳಿ

ಶ್ರೀ ಐವಾನ್ ನಿಗ್ಲಿ ನಾನು ಈಗ ಕನ್ನಡದಲ್ಲಿ ಮಾತನಾಡುತ್ತಿದ್ದೇನೆ, ಕೆಲವೊಂದು ಪದಗಳು ಕನ್ನಡದಲ್ಲಿ ಬರುವುದಿಲ್ಲ ಆಗ ನಾನು ಇಂಗ್ಲೀಷ್‌ನಲ್ಲಿ ಮಾತನಾಡುತ್ತೇನೆ

ಅಧ್ಯಕ್ಷರು ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳುವುದಿಲ್ಲ, ಅವರ ಹಿನ್ನೆಲೆ, ಮುನ್ನೆಲೆ ಎಲ್ಲವನ್ನು ಹೇಳುತ್ತಾರೆ, ಏನು ಮಾಡುವುದು?

ಶ್ರೀ ಐವಾನ್ ನಿಗ್ಲಿ ಮಾನ್ಯ ಅಧ್ಯಕ್ಷರೆ, ಎಲ್ಲಾ ಸ್ಟೇಟ್‌ಗಳಿಗೂ Indian Nursing Council ನಿಂದ letter ಅನ್ನು ಕಳುಹಿಸಿದ್ದಾರೆ ಮೂರು ಜನರನ್ನು ನಾಮಿನೇಟ್ ಮಾಡಬೇಕೆಂದು ಕೇಳಿದ್ದಾರೆ ಇಲ್ಲವೆಂದರೆ ಈ 20 ಜನ ಇತರೆ ರಾಜ್ಯದ ಶುಶ್ರೂಕಷರಿಗೆ ಹೇಗೆ ಅವಾರ್ಡ್ ಕೊಟ್ಟಿದ್ದಾರೆ? ಹೇಗೆ ಹುಡುಕಿ ಕೊಟ್ಟಿದ್ದಾರೆ? How did they come to know that these nurses are the deserving nurses to be awarded? ತಮಿಳು ನಾಡಿಗೆ ಕೊಟ್ಟಿದ್ದಾರೆ 20 ಅವಾರ್ಡ್ ಅನ್ನು ಕೊಟ್ಟಿದ್ದಾರೆ, ಕರ್ನಾಟಕ ರಾಜ್ಯಕ್ಕೆ ಏಕೆ ಕೊಟ್ಟಿಲ್ಲ ಕರ್ನಾಟಕಕ್ಕೆ ಏಕೆ ಕೊಡಲಿಲ್ಲ ನರ್ಸಿಂಗ್ ಅವಾರ್ಡ್ ಏಕೆಂದರೆ, ಸುತ್ತೋಲೆ ಸಿಕ್ಕಿದ ಮೇಲೂ ನಮ್ಮ ರಾಜ್ಯದಿಂದ ಬರೆದು ಕಳುಹಿಸಲಿಲ್ಲ I think, it has not come to the notice of Hon'ble Minister ಸುತ್ತೋಲೆ ಬಂದಿರಬಹುದು ಅದರ ಬಗ್ಗೆ ಸೆಂಟ್ರಲ್ ಗೌರ್ನ್‌ಮೆಂಟ್ ಮಾಹಿತಿಯೊಂದಿಗೆ ಒಂದು ಲೆಟರ್ ಕಳುಹಿಸ ಬೇಕು

ಶ್ರೀ ವಿ ಎಸ್ ಆಚಾರ್ಯ ಭಾರತೀಯ ಶುಶ್ರೂಷಾ ಪರಿಷತ್ತಿನಿಂದ ಅಥವಾ ಕೇಂದ್ರ ಸರ್ಕಾರದ ಆರೋಗ್ಯ ಸಚಿವಾಲಯದಿಂದ ನನ್ನ ವೈದ್ಯಕೀಯ ಶಿಕ್ಷಣದ ಇಲಾಖೆಗೆ, ಫ್ಲಾರೆನ್ಸ್ ನೈಟಿಂಗೇಲ್ ಪ್ರಶಸ್ತಿಗೆ ನಿಮ್ಮ ರಾಜ್ಯದಿಂದ ಮೂವರನ್ನು ಆಯ್ಕೆ ಮಾಡಿ ಕಳುಹಿಸಬೇಕೆಂದು ಯಾವ ಪತ್ರವೂ ಬಂದಿಲ್ಲ ಮಾನ್ಯ ಸದಸ್ಯರು ಕೇಳಿರುವಂಥ ಪ್ರಶ್ನೆ ಇದು ನಮ್ಮ ವೈದ್ಯಕೀಯ ಶಿಕ್ಷಣ ಇಲಾಖೆಗೆ ಯಾವುದೇ ಎನ್‌ಕ್ವೈರಿ ಬಂದಿಲ್ಲ ರಾಷ್ಟ್ರಪತಿ

ಭವನದಲ್ಲಿ ಪ್ರತಿವರ್ಷ ಮೇ 12 ರಂದು ಕೊಡುವಂಥ ಈ ಪ್ರಶಸ್ತಿಗಾಗಿ ಅರ್ಜಿ ಕಳುಹಿಸಿ ಎಂದು ಯಾವ ಲೆಟರ್ ಬಂದಿಲ್ಲ

ಶ್ರೀ ಕೆ ಆರ್ ರಮೇಶ್ ಕುಮಾರ್ Let us put it this way ಫ್ಲಾರೆನ್ಸ್ ನೈಟಿಂಗೇಲ್ ಪ್ರಶಸ್ತಿ ಎನ್ನತಕ್ಕಂಥ ಯಾವುದಾದರೂ ಪ್ರಶಸ್ತಿ ಅಸ್ತಿತ್ವದಲ್ಲಿದೆಯೇ? ಇದ್ದರೆ, ಆ ಪ್ರಶಸ್ತಿಯನ್ನು ಕೊಡುವುದಕ್ಕೆ ವಿಧಿ ವಿಧಾನಗಳೇನು? Let us try to know

ಶ್ರೀ ವಿ ಎಸ್ ಆಚಾರ್ಯ ನಾನು ಆಗಲೇ ಹೇಳಿದ್ದನ್ನೇ ಮತ್ತೊಮ್ಮೆ ರಿಪೀಟ್ ಮಾಡಬೇಕಾಗುತ್ತದೆ ಭಾರತ ಸರ್ಕಾರದ ಯಾವುದೇ ಆರೋಗ್ಯ ಸಚಿವಾಲಯದಿಂದ ಅಥವಾ ನರ್ಸಿಂಗ್ ಕೌನ್ಸಿಲ್‌ನಿಂದ ನಮಗೆ ಯಾವುದೇ ಎನ್‌ಕ್ವೈರಿ ಬರಲಿಲ್ಲ ಹಾಗಾಗಿ ಅದಕ್ಕೆ ಹೆಸರನ್ನು ಕೊಡುವ ಅಥವಾ ಬಿಡುವ ಪ್ರಶ್ನೆ ಉದ್ಭವಿಸುವುದಿಲ್ಲ ನಮ್ಮ ರಾಜ್ಯದಲ್ಲಿ ರಾಜ್ಯ ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಬೇರೆ ಬೇರೆ ಸಂಘಟನೆಗಳು, ಸಂಬಂಧ ಪಟ್ಟಂಥ ನರ್ಸಿಂಗ್ ಕೌನ್ಸಿಲ್‌ನವರು ಪ್ರಶಸ್ತಿಯನ್ನು ನೈಟಿಂಗೇಲರ ಬರ್ತ್‌ಡೇ ದಿವಸ ಮೇ 12 ರಂದು ಬರ್ತ್‌ಡೇ ಆಚರಣೆ ಮಾಡಿ ಕೊಡುತ್ತಿದ್ದಾರೆ ನಮಗೆ ಕೇಂದ್ರ ಸರ್ಕಾರದಿಂದೇನಾದರೂ ಅಂಥ ಎನ್‌ಕ್ವೈರಿ ಬಂದರೆ, ನಾವು ಒಳ್ಳೆ ಅರ್ಹರನ್ನು ಆಯ್ಕೆ ಮಾಡಿ ಕಳುಹಿಸುತ್ತೇವೆ

ಶ್ರೀ ಐವಾನ್ ನಿಗ್ಲಿ 2000ದ ಇಸವಿಯಲ್ಲಿ Anglo Indian Unity Centre ವತಿಯಿಂದ state level award ಅನ್ನು 12 ಜನ ಅರ್ಹ ನರ್ಸ್‌ಗಳಿಗೆ ವರ್ಷಂಪ್ರತಿ ಆಯ್ಕೆ ಮೂಲಕ ನಾವು Florence Nightingale Nurses Award Committee ಯನ್ನು ರಚನೆ ಮಾಡಿ ಕರ್ನಾಟಕ ರಾಜ್ಯದಲ್ಲಿ 12 ಜನ ನರ್ಸ್‌ಗಳಿಗೆ ಈ ಅವಾರ್ಡನ್ನು ಕೊಡಲಾಗುತ್ತಿದೆ ಕಳೆದ 8 ವರ್ಷಗಳಿಂದ ಈ ಅವಾರ್ಡನ್ನು ಕೊಡಲಾಗುತ್ತಿದೆ ಕೇಂದ್ರ ಸರ್ಕಾರದವರು ಕೊಟ್ಟಿರುವ 20 ಅವಾರ್ಡಿನ ಬಗ್ಗೆ ನಮ್ಮ ಕರ್ನಾಟಕ ಸರ್ಕಾರಕ್ಕೆ ಹೇಗೆ ಗೊತ್ತಾಗಲಿಲ್ಲ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ ಬಾಕಿ ಎಲ್ಲ ಕಡೆಗಳಲ್ಲಿ ಅವರು ಈ ಅವಾರ್ಡನ್ನು ಹೇಗೆ ಕೊಟ್ಟರು? ಎಲ್ಲಾ ರಾಜ್ಯಗಳನ್ನೊಳಗೊಂಡು 20 ಅವಾರ್ಡ್‌ನ್ನು ಕೊಟ್ಟಿದ್ದಾರೆ ಕೇಂದ್ರ ಸರ್ಕಾರದಿಂದ ಈ ತರಹದ ಒಂದು ಅವಾರ್ಡ್‌ನ್ನು ಕೊಡುತ್ತಿರುವಾಗ ನಮ್ಮ ಸ್ಟೇಟ್‌ನಿಂದ ಅದಕ್ಕೆ ಏಕೆ ಅಪ್ಲೈ ಮಾಡಲಿಲ್ಲ ಈ ರೀತಿಯ ಅವಾರ್ಡ್‌ನ್ನು ಕೊಟ್ಟು 10 ವರ್ಷಗಳಾಗುತ್ತು ಅದಕ್ಕೂ ಮುಂಚೆ,

ನರ್ಸ್‌ಗಳಿಗೆ ರಾಷ್ಟ್ರಪತಿ ಅವಾರ್ಡನ್ನು ಕೊಡುತ್ತಿದ್ದರು ಅದರ ಜೊತೆಗೆ, ನಾವು Anglo Indian Unity Centre ನಿಂದ Florence Nightingale Nurses Award ಕೊಡುವಾಗ ಪ್ರತಿಯೊಂದು ಸಾರಿಯೂ ಸಂಬಂಧ ಪಟ್ಟ ಮಂತ್ರಿಗಳನ್ನು ಕರೆದು ಚರ್ಚೆ ಮಾಡುತ್ತಿದ್ದೆವೆ ಕನಿಷ್ಟ ಕನ್ನಡ ರಾಜ್ಯೋತ್ಸವದ ಒಂದು ಅವಾರ್ಡನ್ನು ನರ್ಸಿಂಗ್ ಕ್ಷೇತ್ರಕ್ಕೆ ಕೊಡಬೇಕೆಂದು ನಾವು ಸುಮಾರು ಸಾರಿ ಹೇಳಿದ್ದೇವೆ ಪ್ರತಿಯೊಂದು ಸಾರಿ ಹೇಳಿದಾಗಲೂ ಕೊಡುತ್ತೇವೆ ಕೊಡುತ್ತೇವೆ ಎಂದು ಹೇಳಿರುವುದು ಬಿಟ್ಟರೆ ಅದನ್ನು ಕಾರ್ಯರೂಪಕ್ಕೆ ತಂದಿರುವುದಿಲ್ಲ ಎಲ್ಲ ಕ್ಷೇತ್ರಗಳಲ್ಲಿರುವವರಿಗೂ ಕೊಡುತ್ತಿದ್ದಾರೆ ಟೀಚರ್ಸ್‌ಗೆ ಕೊಡುತ್ತಿದ್ದಾರೆ, ಪೋಲೀಸರಿಗೆ ಕೊಡುತ್ತಿದ್ದಾರೆ ಆದರೆ ನರ್ಸ್‌ಗಳಿಗೆ ಕೊಡುತ್ತಿಲ್ಲ More than one lakh nurses are working in Karnataka state and this is the Most sacred profession in this world ಅದಕ್ಕೆ I would like to recommend the Hno'ble Minister and the Government that Legislative council ನಲ್ಲಿ ಒಂದು ನರ್ಸ್‌ಗೆ MLC ಸ್ಥಾನವನ್ನಾದರೂ ನರ್ಸಿಂಗ್ ವೃತ್ತಿಯಲ್ಲಿರುವವರಿಗೆ ಮೀಸಲಿಟ್ಟು ಅವಕಾಶ ಮಾಡಲು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ

ಶ್ರೀ ವಿ ಎಸ್ ಆಚಾರ್ಯ ರಾಜ್ಯಮಟ್ಟದಲ್ಲಿ ನರ್ಸ್‌ಗಳಿಗೆ, ಶುಶ್ರೂಕರುಗಳಿಗೆ ಪ್ರಶಸ್ತಿಯನ್ನು ಕೊಡುವಂಥಾದ್ದರ ಬಗ್ಗೆ ಯೋಚನೆ ಮಾಡುತ್ತದೆ ಸದನಕ್ಕೆ ನೇಮಕ ಮಾಡುವ ವಿಚಾರ ಮಾನ್ಯ ಮುಖ್ಯ ಮಂತ್ರಿಗಳಿಗೆ ಮತ್ತು ಎಲ್ಲರಿಗೂ ಸೇರಿದಂಥಾದ್ದು, ಯೋಚನೆ ಮಾಡುತ್ತೇವೆ

ಪ್ರಶ್ನೆ ಸಂಖ್ಯೆ 214------ ಮಾನ್ಯ ಸದಸ್ಯರು ಹಾಜರಿರಲಿಲ್ಲ

ಪ್ರಶ್ನೆ ಸಂಖ್ಯೆ 380------ ಮಾನ್ಯ ಸದಸ್ಯರು ಹಾಜರಿರಲಿಲ್ಲ

ಪ್ರಶ್ನೆ ಸಂಖ್ಯೆ 395------ ಮಾನ್ಯ ಸದಸ್ಯರು ಹಾಜರಿರಲಿಲ್ಲ

ಪ್ರಶ್ನೆ ಸಂಖ್ಯೆ 381------

ಅಧ್ಯಕ್ಷರು ರಾಜೇಂದ್ರ ವರ್ಮಾರವರು ಈ ಪ್ರಶ್ನೆಗೆ 15 ದಿನಗಳ ಕಾಲಾವಕಾಶವನ್ನು ಕೋರಿದ್ದಾರೆ

ವಿಟ್ಲ ಐಟಿಐ ಸಮಸ್ಯೆಗಳು